I/444697/2023

**ಕರ್ನಾಟಕ ಸರ್ಕಾರ**
**ಅರಣ್ಯ ಇಲಾಖೆ**

**ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಹಾಗೂ ಆಯ್ಕೆ ಪ್ರಾಧಿಕಾರ ರವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು – 560003**

**ಅಧಿಸೂಚನೆ ಸಂಖ್ಯೆ: ಬಿ9/ನೇಮಕಾತಿ/ವಿವ-1/2019-20 ದಿನಾಂಕ: 02.03.2020**
**339 ಅರಣ್ಯ ರಕ್ಷಕ ಹುದ್ದೆಗಳಿಗೆ ನೇರ ನೇಮಕಾತಿ**

# ಪ್ರಕಟಣೆ

ದಿನಾಂಕ: 11.05.2023ರ ಪ್ರಕಟಣೆಯನ್ನು ಮುಂದುವರೆಸುತ್ತಾ, ಅಧಿಸೂಚನೆಯಲ್ಲಿ ಅಧಿಸೂಚಿಸಿದ ಹುದ್ದೆಗಳ ಪೈಕಿ ಖಾಲಿ ಉಳಿದಿರುವ ಹುದ್ದೆಗಳಿಗೆ *(ಆಯಾ ಪ್ರವರ್ಗಗಳಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದೇ ಇರುವುದರಿಂದ ಮುಂದಿನ ನೇಮಕಾತಿ ಪ್ರಕ್ರಿಯೆಯ ಮೂಲಕ ಭರ್ತಿಮಾಡಬೇಕಾದ ಹುದ್ದೆಗಳನ್ನು ಹೊರತುಪಡಿಸಿ)* ಮೆರಿಟ್ ಹಾಗೂ ಅದೇ ಪ್ರವರ್ಗಕ್ಕೆ (ನೇರ ಮತ್ತು ಸಮತಳ ಮೀಸಲಾತಿ ಸೇರಿದಂತೆ) ಮೀಸಲಾತಿ ಆಧಾರದ ಮೇಲೆ ಕರ್ನಾಟಕ ಅರಣ್ಯ ಇಲಾಖೆ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 2019ರ ಷೆಡ್ಯೂಲ್-Iರ ಕ್ರ.ಸಂ. 14ರ ಕಂಡಿಕೆ (9)ರನ್ವಯ ವೃತ್ತವಾರು ಪ್ರತ್ಯೇಕವಾಗಿ ತಾತ್ಕಾಲಿಕ ಹೆಚ್ಚುವರಿ ಪಟ್ಟಿಗಳನ್ನು ಪ್ರಕಟಣೆ ಮಾಡಿ, ತಾತ್ಕಾಲಿಕ ಹೆಚ್ಚುವರಿ ಪಟ್ಟಿಗಳ ಕುರಿತು ಯಾವುದಾದರೂ ಆಕ್ಷೇಪಣೆ ಇದ್ದಲ್ಲಿ, ಲಿಖಿತ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳು ಮಾತ್ರ ನಿಗದಿತ ನಮೂನೆಯಲ್ಲಿ ಸ್ಪಷ್ಟ ರೀತಿಯಲ್ಲಿ ಆಕ್ಷೇಪಣೆಯನ್ನು ವಿವರಿಸಿ ಈ ಕಛೇರಿಯ ಇ-ಮೇಲ್ "**kfdfgrect@gmail.com**"ಗೆ ದಿನಾಂಕ: 26.05.2023ರೊಳಗೆ ಸಲ್ಲಿಸಲು ಸೂಚಿಸಲಾಗಿರುತ್ತದೆ.

ಅದರನ್ವಯ, ದಿನಾಂಕ: 11.05.2023ರಿಂದ 26.05.2023ರ ವರೆಗೆ ಈ ಕೆಳಕಂಡಂತೆ ಆಕ್ಷೇಪಣೆಗಳು ಸ್ವೀಕೃತ್ತವಾಗಿರುತ್ತದೆ. ಸದರಿ ಆಕ್ಷೇಪಣೆಗಳ ವಿಲೇವಾರಿ ವಿವರಗಳನ್ನು ಇದರೊಂದಿಗೆ **ಅನುಬಂಧ-1**ರಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ.

ಅನುಬಂಧ-1ರ ತಃಖ್ತೆಯಲ್ಲಿನ ಕ್ರಮ ಸಂಖ್ಯೆ: 4ರಲ್ಲಿ ಶ್ರೀ ಬಲ್ಲಿಂಗಪ್ಪರ ಮೌನೇಷ, ನೋಂದಣಿ ಸಂಖ್ಯೆ: 2133574, ಅರ್ಜಿ ಸಂಖ್ಯೆ: 4015080 ಇವರು ಬೆಂಗಳೂರು ವೃತ್ತದ ತಾತ್ಕಾಲಿಕ ಹೆಚ್ಚುವರಿ ಪಟ್ಟಿಯಲ್ಲಿ GM-RURAL ಪ್ರವರ್ಗದಡಿ ಆಯ್ಕೆಯಾಗಿದ್ದು, ಸದರಿ ಅಭ್ಯರ್ಥಿಯು ಸ್ವ-ಇಚ್ಛೆಯಿಂದ ಅರಣ್ಯ ರಕ್ಷಕ ಹುದ್ದೆಯನ್ನು ತ್ಯಜಿಸಿರುವುದಾಗಿ ಲಿಖಿತವಾಗಿ ತಿಳಿಸಿರುವುದರಿಂದ, ಸದರಿಯವರ ಅರಣ್ಯ ರಕ್ಷಕ ಹುದ್ದೆಯ ಅಭ್ಯರ್ಥಿತ್ವವನ್ನು ರದ್ದುಪಡಿಸಿ, ಸದರಿ ಅಭ್ಯರ್ಥಿಯ ಬದಲಾಗಿ GM-RURAL ಪ್ರವರ್ಗಕ್ಕೆ (ನೇರ ಮತ್ತು ಸಮತಳ ಮೀಸಲಾತಿ ಸೇರಿದಂತೆ) ಮೀಸಲಾತಿ ಆಧಾರದ ಮೇಲೆ ಬೆಂಗಳೂರು ವೃತ್ತಕ್ಕೆ ಸಂಬಂಧಿಸಿದಂತೆ ಪರಿಷ್ಕೃತ ತಾತ್ಕಾಲಿಕ ಹೆಚ್ಚುವರಿ ಪಟ್ಟಿಯನ್ನು ಇದರೊಂದಿಗೆ **ಅನುಬಂಧ-2**ರಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ.

ಬೆಂಗಳೂರು ವೃತ್ತಕ್ಕೆ ಸಂಬಂಧಿಸಿದಂತೆ ಈ ಮೇಲಿನ ಅನುಬಂಧ-2ರಲ್ಲಿನ ಪರಿಷ್ಕೃತ ತಾತ್ಕಾಲಿಕ ಹೆಚ್ಚುವರಿ ಪಟ್ಟಿಯ ಕುರಿತು ಯಾವುದಾದರೂ ಆಕ್ಷೇಪಣೆ ಇದ್ದಲ್ಲಿ, **ಬೆಂಗಳೂರು ವೃತ್ತದಲ್ಲಿ ಅರಣ್ಯ ರಕ್ಷಕ ಹುದ್ದೆಯ ಲಿಖಿತ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳು ಮಾತ್ರ**

I/444697/2023

ಈ ಕೆಳಕಂಡ ನಮೂನೆಯಲ್ಲಿ ಸ್ಪಷ್ಟ ರೀತಿಯಲ್ಲಿ ಆಕ್ಷೇಪಣೆಯನ್ನು ವಿವರಿಸಿ ಈ ಕಛೇರಿಯ ಇ-ಮೇಲ್ "**kfdfgrect@gmail.com**"ಗೆ ದಿನಾಂಕ: 30.06.2023ರೊಳಗೆ ಸಲ್ಲಿಸತಕ್ಕದ್ದು.

| ಕ್ರ. ಸಂ. | ಅಭ್ಯರ್ಥಿಯ ಪೂರ್ಣ ಹೆಸರು | ನೋಂದಣಿ ಸಂಖ್ಯೆ | ಅರ್ಜಿ ಸಂಖ್ಯೆ | ಜನ್ಮ ದಿನಾಂಕ | ಆಕ್ಷೇಪಣೆ |
|---|---|---|---|---|---|
| | | | | | |

ಈ ಮೇಲೆ ನಿಗದಿಪಡಿಸಿದ ದಿನಾಂಕದ ನಂತರ, ಮತ್ತು ಈ ಮೇಲಿನ ವಿಧಾನವನ್ನು ಹೊರತುಪಡಿಸಿ ಇತರೆ ವಿಧಾನ/ಇ-ಮೇಲ್ ಮೂಲಕ ಸ್ವೀಕೃತವಾದ ಹಾಗೂ ಅಸ್ಪಷ್ಟ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

*[**ಟಿಪ್ಪಣಿ:***

1. *ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ದಾಖಲಿಸಿರುವ ಮಾಹಿತಿಯನ್ನು ಮಾತ್ರ ಆಧರಿಸಿ ಈ ಪ್ರಕಟಣೆಯೊಂದಿಗೆ ಲಗತ್ತಿಸಿರುವ ಬೆಂಗಳೂರು ವೃತ್ತದ ಪರಿಷ್ಕೃತ ತಾತ್ಕಾಲಿಕ ಹೆಚ್ಚುವರಿ ಪಟ್ಟಿಯನ್ನು ತಯಾರಿಸಲಾಗಿದ್ದು, ಅಭ್ಯರ್ಥಿಗಳು ಸಲ್ಲಿಸಿರುವ ಮಾಹಿತಿ/ದಾಖಲೆ/ಪ್ರಮಾಣ ಪತ್ರಗಳಿಗೆ ಸಂಬಂಧಿಸಿದ ಪ್ರಾಧಿಕಾರಿಗಳಿಂದ ನೈಜತೆಯ ದೃಢೀಕರಣದ ಷರತ್ತಿಗೆ ಒಳಪಟ್ಟಿರುತ್ತದೆ.*
2. *ಈ ಕಛೇರಿಯಿಂದ ದಿನಾಂಕ: 11.05.2023ರಂದು ಪ್ರಕಟಿಸಿದ ಉಳಿದ ವೃತ್ತಗಳ ತಾತ್ಕಾಲಿಕ ಹೆಚ್ಚುವರಿ ಪಟ್ಟಿಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.]*

**Signed by Rajiv Ranjan, Ifs**
**Date: 24-06-2023 11:25:52**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ಹಾಗೂ
ಆಯ್ಕೆ ಪ್ರಾಧಿಕಾರ

ದಿನಾಂಕ: 24.06.2023

I/444698/2023

**ಕರ್ನಾಟಕ ಸರ್ಕಾರ**
**ಅರಣ್ಯ ಇಲಾಖೆ**

**ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಹಾಗೂ ಆಯ್ಕೆ ಪ್ರಾಧಿಕಾರ ರವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು – 560003**

**ಅಧಿಸೂಚನೆ ಸಂಖ್ಯೆ: ಬಿ9/ನೇಮಕಾತಿ/ವಿವ-1/2019-20 ದಿನಾಂಕ: 02.03.2020**
**339 ಅರಣ್ಯ ರಕ್ಷಕ ಹುದ್ದೆಗಳಿಗೆ ನೇರ ನೇಮಕಾತಿ**

# ಪ್ರಕಟಣೆ ದಿನಾಂಕ: 24.06.2023ರ ಅನುಬಂಧ - 1

| ಕ್ರ. ಸಂ. | ಅಭ್ಯರ್ಥಿಯ ಪೂರ್ಣ ಹೆಸರು | ನೋಂದಣಿ ಸಂಖ್ಯೆ | ಅರ್ಜಿ ಸಂಖ್ಯೆ | ಜನ್ಮ ದಿನಾಂಕ | ಆಕ್ಷೇಪಣೆ | ಆಕ್ಷೇಪಣೆಯ ಕುರಿತು ಕೈಗೊಂಡ ಕ್ರಮ |
|---|---|---|---|---|---|---|
| 1 | ಶ್ರೀನಿವಾಸ ಮಣಗೂರು | 2100113 | 4111520 | 25-06-1998 | ಸರ್ ನಾನು Application ಹಾಕುವಾಗ PUC, SSLC, Adhar Card, Rural Certificate, Kannada Medium, Income Cast Certificate, Photo, Signature ಹೀಗೆ ಎಲ್ಲಾ ಮಾಹಿತಿಯನ್ನು documents ಗಳನ್ನು upload ಮಾಡಿದ್ದೇನೆ. ಬೆಳಗಾವಿ Circle FG ಪರೀಕ್ಷೆ ಬರೆದು 56 ಅಂಕಗಳು ಮತ್ತು PUC ಅಲ್ಲಿ 90% ಇದೆ. ಒಟ್ಟು 73 ಅಂಕ ಆಗಿದೆ. ಆದ್ದರಿಂದ ನೀವು ಬಿಟ್ಟ ಅರಣ್ಯ ರಕ್ಷಕ ಪಟ್ಟಿಯಲ್ಲಿ GM-RURAL Post ಗೆ ನನ್ನನ್ನು ಪರಿಗಣಿಸಬೇಕೆಂದು ನಿಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತೇನೆ.<br><br>ನಮಸ್ಕಾರಗಳು ಸರ್ ಹಾಗೂ ಎಲ್ಲಾ ನನ್ನ PDF Documents ಗಳು ಮತ್ತು FG OMR ಶೀಟ್ ನಿಮಗೆ mail ಮಾಡಿದ್ದೇನೆ. | ನೀವು ಸಲ್ಲಿಸಿರುವ ಆಕ್ಷೇಪಣೆಯನ್ನು ಪರಿಶೀಲಿಸಲಾಗಿ, ನೀವು ಆನ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಯಲ್ಲಿ ನಮೂದಿಸಿರುವ ಮಾಹಿತಿ ಹಾಗೂ ಅಪ್‌ಲೋಡ್ ಮಾಡಿರುವ ದಾಖಲೆಗಳನ್ನು ಈ ಕಛೇರಿಯಲ್ಲಿ ಕೂಲಂಕಶವಾಗಿ ಪರಿಶೀಲಿಸಲಾಗಿದೆ. ಸದರಿ ಆನ್‌ಲೈನ್ ಅರ್ಜಿಯಲ್ಲಿ ನೀವು ಪಿಯುಸಿಯಲ್ಲಿ ಶೇಕಡ 90 ಅಂಕಗಳನ್ನು ಪಡೆದಿರುವುದಕ್ಕೆ ಹಾಗೂ 2ಎ ಪ್ರವರ್ಗಕ್ಕೆ ಸೇರಿರುವುದಕ್ಕೆ ಆಯ್ಕೆಯನ್ನು ಮಾಡಿರುತ್ತೀರಿ. ಅಲ್ಲದರೆ, Kannada Medium - **No**, Rural Candidate - **No**, Handicapped Person - **No**, Project Displaced Person (PDP) - **No** ಹಾಗೂ Ex-Military Person - **No** ಎಂದು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುತ್ತೀರಿ.<br><br>ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ ಮಾಹಿತಿ ಹಾಗೂ ಅಪ್‌ಲೋಡ್ ಮಾಡಿರುವ ದಾಖಲೆಗಳನ್ನು ಆಧರಿಸಿ ಮತ್ತು ಅಭ್ಯರ್ಥಿಗಳು ಅರಣ್ಯ ರಕ್ಷಕ ಹುದ್ದೆಯ ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಪ್ರವರ್ಗವಾರು ಮೀಸಲಾತಿಯನ್ನು ಪರಿಗಣಿಸಿ ತಾತ್ಕಾಲಿಕ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಸಿದ್ಧಪಡಿಸಿ ಪ್ರಕಟಿಸಲಾಗಿರುತ್ತದೆ. |

I/444698/2023

| ಕ್ರ. ಸಂ. | ಅಭ್ಯರ್ಥಿಯ ಪೂರ್ಣ ಹೆಸರು | ನೋಂದಣಿ ಸಂಖ್ಯೆ | ಅರ್ಜಿ ಸಂಖ್ಯೆ | ಜನ್ಮ ದಿನಾಂಕ | ಆಕ್ಷೇಪಣೆ | ಆಕ್ಷೇಪಣೆಯ ಕುರಿತು ಕೈಗೊಂಡ ಕ್ರಮ |
|---|---|---|---|---|---|---|
| | | | | | | 339 ಅರಣ್ಯ ರಕ್ಷಕ ಹುದ್ದೆಗಳಿಗೆ ನೇರ ನೇಮಕಾತಿ ಅಧಿಸೂಚನೆ ಸಂಖ್ಯೆ: ಬಿ9/ನೇಮಕಾತಿ/ವಿವ-1/2019-20 ದಿನಾಂಕ: 02.03.2020ರಲ್ಲಿ ಈ ಕೆಳಕಂಡಂತೆ ಷರತ್ತು ಇರುತ್ತದೆ.<br>*“**ಕಂಡಿಕೆ 1.1.** ಜನ್ಮ ದಿನಾಂಕ ದೃಢೀಕರಿಸುವ ಪ್ರಮಾಣ ಪತ್ರ, ಶೈಕ್ಷಣಿಕ ಪ್ರಮಾಣ ಪತ್ರಗಳು, ಜಾತಿ / ಪ್ರವರ್ಗ ದೃಢೀಕರಿಸುವ ಪ್ರಮಾಣ ಪತ್ರಗಳು, ಗ್ರಾಮೀಣ, ಕನ್ನಡ ಮಾಧ್ಯಮ, ಯೋಜನಾ ನಿರಾಶ್ರಿತ, ಕುಷ್ಠರೋಗದಿಂದ ಗುಣಮುಖ ಹೊಂದಿದ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ, ಸೈನಿಕ ಸೇವೆ ದೃಢೀಕರಣ ಪ್ರಮಾಣ ಪತ್ರಗಳನ್ನು ಸ್ಕ್ಯಾನ್ ಮಾಡಿ ಇಲಾಖಾ ವೆಬ್‌ಸೈಟ್‌ಗೆ ಅರ್ಜಿ ಸಲ್ಲಿಸುವ ವೇಳೆಯಲ್ಲಿ ಅಪ್‌ಲೋಡ್ ಮಾಡತಕ್ಕದ್ದು. ಈ ಕುರಿತು ಪೂರ್ಣ ಮಾಹಿತಿಯನ್ನು ಅರ್ಜಿ ಸಲ್ಲಿಸುವ ವೇಳೆಯಲ್ಲಿ ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು. ಅಭ್ಯರ್ಥಿಯು ಯಾವ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸುವ ವೇಳೆ ಅಪ್‌ಲೋಡ್ ಮಾಡಿರುತ್ತಾರೆಯೋ ಅದೇ ಪ್ರಮಾಣ ಪತ್ರವನ್ನು ಎಲ್ಲಾ ಹಂತದಲ್ಲೂ ಪರಿಗಣನೆಗೆ ತೆಗೆದುಕೊಳ್ಳಲಾಗುವುದು. **ಇದನ್ನು ಯಾವ ಹಂತದಲ್ಲಿಯೂ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.**”*<br><br>**ನೀವು ಆನ್‌ಲೈನ್ ಅರ್ಜಿಯಲ್ಲಿ ಈಗಾಗಲೇ ನಮೂದಿಸಿರುವ / ಆಯ್ಕೆ ಮಾಡಿರುವ ಮಾಹಿತಿ / ದಾಖಲೆಗಳಲ್ಲಿ ಈಗ ಸೇರ್ಪಡೆ/ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ. ಆದುದರಿಂದ, ನೀವು ಸಲ್ಲಿಸಿರುವ ಆಕ್ಷೇಪಣೆಯನ್ನು ಈ ಮೂಲಕ ವಿಲೇ ಮಾಡಲಾಗಿದೆ.** |
| 2 | ಮನು ಬಿ. ಆರ್. | 2054441 | 4401904 | 06-10-1999 | 1. ಈ ಕುರಿತು ತಮಗೆ ನನ್ನ ಮನವಿ ಸಲ್ಲಿಕೆ ದಿನಾಂಕ (08.08.2022) | ನೀವು ಸಲ್ಲಿಸಿರುವ ಆಕ್ಷೇಪಣೆಯನ್ನು ಪರಿಶೀಲಿಸಲಾಗಿ, ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ ಈ ಕಛೇರಿಯ |

I/444698/2023

| ಕ್ರ. ಸಂ. | ಅಭ್ಯರ್ಥಿಯ ಪೂರ್ಣ ಹೆಸರು | ನೋಂದಣಿ ಸಂಖ್ಯೆ | ಅರ್ಜಿ ಸಂಖ್ಯೆ | ಜನ್ಮ ದಿನಾಂಕ | ಆಕ್ಷೇಪಣೆ | ಆಕ್ಷೇಪಣೆಯ ಕುರಿತು ಕೈಗೊಂಡ ಕ್ರಮ |
|---|---|---|---|---|---|---|
| | | | | | 2. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ), ಚಾಮರಾಜನಗರ ರವರಿಗೆ ನನ್ನ ಮನವಿ ಸಲ್ಲಿಕೆ ದಿನಾಂಕ: 08.08.2022<br>3. ಉಪ ಅರಣ್ಯಸಂರಕ್ಷಣಾಧಿಕಾರಿಗಳು ಕಾವೇರಿ ವನ್ಯ ಜೀವಿ ವಿಭಾಗ ಕಛೇರಿಗೆ ನನ್ನ ಮನವಿ ಸಲ್ಲಿಕೆ ದಿನಾಂಕ: 29.01.2023<br><br>ಈ ಮೇಲ್ಕಂಡ ವಿಷಯಕ್ಕೆಸಂಬಂಧಿಸಿದಂತೆ ನೋಂದಣಿ ಸಂಖ್ಯೆ: 2054441 ಮನು. ಬಿ.ಆರ್. ಆದ ನಾನು 2ಎ ಜಿ.ಎಮ್ ಕೋಟಾದಡಿ, ಅರಣ್ಯ ರಕ್ಷಕ ಹುದ್ದೆ, ಚಾಮರಾಜನಗರ ವೃತ್ತ, ಕಾವೇರಿ ವನ್ಯಜೀವಿ ವಿಭಾಗಕ್ಕೆ ಆಯ್ಕೆಯಾಗಿದ್ದು, ಇಲಾಖೆಯು ನಡೆಸುವ ವೈದ್ಯಕೀಯ ಪರೀಕ್ಷೆ ಹಾಗೂ ದಾಖಲಾತಿ ಪರಿಶೀಲನೆಗೆ ಹಾಜರಾಗಿರುತ್ತೇನೆ. ಇದೇ ಸಮಯದಲ್ಲಿ ಅಗ್ನಿಶಾಮಕ ಇಲಾಖೆಗೂ ಸಹ ಆಯ್ಕೆಯಾಗಿರುತ್ತೇನೆ. ಹೀಗಾಗಿ ನಾನು ಗೊಂದಲದಲ್ಲಿ ಅಗ್ನಿಶಾಮಕ ಇಲಾಖೆಗೆ ವರದಿ ಮಾಡಿಕೊಂಡಿರುತ್ತೇನೆ. ನಂತರದ ದಿನಗಳಲ್ಲಿ ಅರಣ್ಯರಕ್ಷಕ ಹುದ್ದೆಗೆ ಸೇರಲು ಇಷ್ಟ ಇದ್ದುದರಿಂದ ಅರಣ್ಯ ರಕ್ಷಕ ಹುದ್ದೆಗೆ ಸೇರಬೇಕೆಂದು ಬಯಸಿ ಉಲ್ಲೇಖ ಪತ್ರ (1)ರ ಪ್ರಕಾರ ತಮಗೆ ಮನವಿ ಸಲ್ಲಿಸಿರುತ್ತೇನೆ. ಉಲ್ಲೇಖಪತ್ರ (2)ರ ಪ್ರಕಾರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ), ಚಾಮರಾಜನಗರ ಇವರಿಗೂ ಸಹ ಮನವಿ ಸಲ್ಲಿಸಿರುತ್ತೇನೆ. ಹಾಗೂ ಉಲ್ಲೇಖ ಪತ್ರ (3)ರಲ್ಲಿ ಕಾವೇರಿ ವನ್ಯ ಜೀವಿ ವಿಭಾಗ ಕಛೇರಿಯಿಂದ ನನ್ನ ವಿಳಾಸಕ್ಕೆ ಅಂಚೆಯ ಮೂಲಕ ಅರಣ್ಯ ರಕ್ಷಕ ಹುದ್ದೆಗೆ ಸೇವೆ ಸಲ್ಲಿಸಲು ಇಷ್ಟ ಇದೆಯೇ ಇಲ್ಲವೇ ಎಂದು ಪತ್ರ ಬಂದ ದಿನದಂದು ನಾನು ಅಗ್ನಿಶಾಮಕ ತರಬೇತಿಯಲ್ಲಿ ಹಾಜರಾಗಿದ್ದರಿಂದ, ನನಗೆ ಸ್ವಲ್ಪ ಕಾಲಾವಕಾಶ ನೀಡಿ ಎಂದು ಉಪಅರಣ್ಯ ಸಂರಕ್ಷಣಾಧಿಕಾರಿಗಳು, ಕಾವೇರಿ ವನ್ಯ | ಪ್ರಕಟಣೆ ದಿನಾಂಕ:20.07.2022 ಮತ್ತು ಮತ್ತೊಂದು ಪ್ರಕಟಣೆ ದಿನಾಂಕ:22.07.2022ರಲ್ಲಿ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳನ್ನು ದಿನಾಂಕ:27.07.2022ರಂದು ಪೂರ್ವಾಹ್ನ 10.30 ಗಂಟೆಗೆ ಸಂಬಂಧಿಸಿದ ವೃತ್ತಗಳ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿಗಳ ಸಮಕ್ಷಮ ಹಾಜರಾಗಲು ಸೂಚಿಸಲಾಗಿರುತ್ತದೆ. ಆದರೆ, ನೀವು ನಿಗದಿತ ದಿನಾಂಕದಂದು ನಿಗದಿತ ಪ್ರಾಧಿಕಾರದ ಸಮಕ್ಷಮ ಹಾಜರಾಗಲು ಮತ್ತು ನೀವು ಮೂಲ ದಾಖಲಾತಿಗಳನ್ನು ಸಕ್ಷಮ ಪ್ರಾಧಿಕಾರದ ಮುಂದೆ ಹಾಜರುಪಡಿಸಲು ವಿಫಲರಾಗಿರುವುದರಿಂದ ನೇಮಕಾತಿ ಪ್ರಾಧಿಕಾರವು ನಿಮಗೆ ನೇಮಕಾತಿ ಆದೇಶವನ್ನು ಜಾರಿಗೊಳಿಸಿರುವುದಿಲ್ಲ.<br><br>ಆದುದರಿಂದ, **ನಿಮ್ಮ ಮನವಿಯನ್ನು ಈ ಹಂತದಲ್ಲಿ ಪರಿಗಣಿಸಲು ಸಾಧ್ಯವಾಗುವುದಿಲ್ಲ ಎಂದು ತಿಳಿಸುತ್ತಾ, ನಿಮ್ಮ ಆಕ್ಷೇಪಣೆಯನ್ನು ಈ ಮೂಲಕ ವಿಲೇ ಮಾಡಲಾಗಿದೆ.** |

| ಕ್ರ. ಸಂ. | ಅಭ್ಯರ್ಥಿಯ ಪೂರ್ಣ ಹೆಸರು | ನೋಂದಣಿ ಸಂಖ್ಯೆ | ಅರ್ಜಿ ಸಂಖ್ಯೆ | ಜನ್ಮ ದಿನಾಂಕ | ಆಕ್ಷೇಪಣೆ | ಆಕ್ಷೇಪಣೆಯ ಕುರಿತು ಕೈಗೊಂಡ ಕ್ರಮ |
|---|---|---|---|---|---|---|
| | | | | | ಜೀವಿ ವಿಭಾಗರವರಿಗೆ ಮನವಿಯನ್ನು ಸಲ್ಲಿಸಿರುತ್ತೇನೆ. ಆದರೆ ತಮ್ಮ ಆದೇಶದಂತೆ ಕಾವೇರಿ ವನ್ಯಜೀವಿ ವಿಭಾಗದಿಂದ ಅಂತಿಮ ಆಯ್ಕೆ ಪಟ್ಟಿಯಿಂದ ಕೈ ಬಿಡಲಾಗಿದೆ. ಎಂದು ಪತ್ರವು ಬಂದಿರುತ್ತದೆ. ಆದರೆ ನನಗೆ ಅರಣ್ಯ ರಕ್ಷಕ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಲು ಇಷ್ಟವಿರುವುದರಿಂದ, ನನ್ನನ್ನು ಅರಣ್ಯರಕ್ಷಕ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಲು ಪರಿಗಣಿಸಬೇಕಾಗಿ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನೀವು ನನ್ನನ್ನು ಪರಿಗಣಿಸಿದ ತಕ್ಷಣವೇ ನಾನು ಅಗ್ನಿಶಾಮಕ ಇಲಾಖೆಗೆ ರಾಜೀನಾಮೆ ಸಲ್ಲಿಸಿ ಅರಣ್ಯ ಇಲಾಖೆಯ ಅರಣ್ಯ ರಕ್ಷಕ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಲು ವರದಿ ಮಾಡಿಕೊಳ್ಳಬಯಸುತ್ತೇನೆ. ದಯವಿಟ್ಟು ನನಗೆ ನೇಮಕಾತಿ ಆದೇಶ ನೀಡಲು ಉಪಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸೂಕ್ತನಿರ್ದೇಶನ ನೀಡುವಂತೆ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಆದರೆ ಇದೀಗ ನೊಂದಣಿ ಸಂಖ್ಯೆ- 2088218, ಎಮ್. ಅಭಿಷೇಕಗೌಡ ಅವರನ್ನು 2ಎ ಜಿ.ಎಮ್ ಕೋಟಾದಡಿ ಆಯ್ಕೆ ಮಾಡಿರುತ್ತೀರಿ. ದಯವಿಟ್ಟು ಅವರನ್ನು ತಾತ್ಕಾಲಿಕ ಆಯ್ಕೆ ಪಟ್ಟಿಯಿಂದ ಕೈ ಬಿಟ್ಟು ನೊಂದಣಿ ಸಂಖ್ಯೆ: 2054441 ಮನು ಬಿ.ಆರ್ ಆದ ನನ್ನನ್ನು 2ಎ ಜಿ.ಎಮ್ ಕೋಟಾದಡಿ ಆಯ್ಕೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. | |
| 3 | ನಾಗರಾಜ ಎಸ್. ಸಲಗಾರ | 2130732 | 4014770 | 01.06.2000 | ಮಾನ್ಯರೆ, ನಾನು ದಿನಾಂಕ: 03.05.2022ರಂದು ಹೊರಡಿಸಲಾದ ಅರಣ್ಯ ರಕ್ಷಕರ ಅಂತಿಮ ಆಯ್ಕೆ ಪಟ್ಟಿಯಲ್ಲಿ ಬೆಂಗಳೂರು ವೃತ್ತಕ್ಕೆ GM RURAL ಮೀಸಲಾತಿ ಅಡಿಯಲ್ಲಿ (Serial No. 8ರಲ್ಲಿ) ಆಯ್ಕೆ ಆಗಿರುತ್ತೇನೆ.<br><br>ಆದರೆ, ದಿನಾಂಕ: 27.07.2022ರಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಸಮಕ್ಷಮ ಹಾಜರಾಗುವ ಕುರಿತು ತಮ್ಮ ಇಲಾಖೆಯಿಂದ | ಈ ಕಛೇರಿ ಅಧಿಸೂಚನೆ ಸಂಖ್ಯೆ: ಬಿ9/ನೇಮಕಾತಿ/ವಿವ-1/2019-20 ದಿನಾಂಕ: 02.03.2020ರಲ್ಲಿ ಈ ಕೆಳಕಂಡಂತೆ ಷರತ್ತಿನನ್ವಯ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ. ***"ಕಂಡಿಕೆ 13.25: ನೇರ ನೇಮಕಾತಿ ಪ್ರಕ್ರಿಯೆಯ ಯಾವುದೇ ವಿಷಯದಲ್ಲಿ ಯಾವುದೇ ಪತ್ರ ವ್ಯವಹಾರಕ್ಕೆ ಆಸ್ಪದವಿರುವುದಿಲ್ಲ.***<br><br>ಮುಂದುವರೆದು, ನೀವು ಸಲ್ಲಿಸಿರುವ ಆಕ್ಷೇಪಣೆಯನ್ನು ಪರಿಶೀಲಿಸಲಾಗಿ, ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ ಈ |

| ಕ್ರ. ಸಂ. | ಅಭ್ಯರ್ಥಿಯ ಪೂರ್ಣ ಹೆಸರು | ನೋಂದಣಿ ಸಂಖ್ಯೆ | ಅರ್ಜಿ ಸಂಖ್ಯೆ | ಜನ್ಮ ದಿನಾಂಕ | ಆಕ್ಷೇಪಣೆ | ಆಕ್ಷೇಪಣೆಯ ಕುರಿತು ಕೈಗೊಂಡ ಕ್ರಮ |
|---|---|---|---|---|---|---|
| | | | | | ಹೊರಡಿಸಲಾದ ಅಧಿಸೂಚನೆ ಸೂಕ್ತ ಸಮಯದಲ್ಲಿ ನನಗೆ ತಿಳಿಯದೇ ಇರುವ ಕಾರಣ ಮಾಹಿತಿ ಕೊರತೆಯಿಂದಾಗಿ ನನಗೆ ಸದರಿ ದಿನಾಂಕದಂದು ಹಾಜರಾಗಲು ಆಗಿರುವುದಿಲ್ಲ.<br><br>ನಾನು ಆ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಅಗ್ನಿಶಾಮಕ ಇಲಾಖೆಯ ವೃತ್ತಿ ಬುನಾದಿ ತರಬೇತಿಯಲ್ಲಿದ್ದು, ಅಧಿಸೂಚನೆ ಕುರಿತು ಮಾಹಿತಿ ತಿಳಿದ ತಕ್ಷಣವೇ ನಮ್ಮ ಪೋಷಕರ ಮೂಲಕ ಬೆಂಗಳೂರು ವೃತ್ತ ಕಛೇರಿಯನ್ನು ಸಂಪರ್ಕಿಸಿ, ಕಛೇರಿಗೆ ವರದಿ ಮಾಡಿಕೊಳ್ಳಲು ಇರುವ ಸಾಧ್ಯತೆಗಳ ಕುರಿತು ಹಲವು ಬಾರಿ ವಿಚಾರಿಸಿರುತ್ತೇನೆ.<br>ಆದರೆ, ಅಭ್ಯರ್ಥಿಯೇ ಖುದ್ದಾಗಿ ಹಾಜರಾದರೇ ಮಾತ್ರ ಆ ಕುರಿತು ಮಾಹಿತಿ ನೀಡುವುದಾಗಿ ತಿಳಿಸಿರುತ್ತೀರಿ. ನಾನು ಆ ವೇಳೆಗಾಗಲೇ ಅಗ್ನಿಶಾಮಕ ಇಲಾಖೆಯ ತರಬೇತಿಯಲ್ಲಿ ಇದ್ದುದರಿಂದ, ಅಲ್ಲಿ ಈ ವಿಷಯ ಕುರಿತು ಪ್ರಸ್ತಾಪಿಸಿ ಅನುಮತಿಗಾಗಿ (ರಜೆ) ಅರ್ಜಿ ಸಲ್ಲಿಸಲಾಗಿ ಮುಖ್ಯ ಕಛೇರಿಯಿಂದ ಅನುಮತಿ ವಿಳಂಬವಾಗಿ ದೊರೆತ ಕಾರಣ<br>ದಿನಾಂಕ: 21.09.2022ರಂದು ಖುದ್ದಾಗಿ ಕಛೇರಿಗೆ ಹಾಜರಾಗಿ ವಿಚಾರಿಸಲಾಗಿ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಬೆಂಗಳೂರು ವೃತ್ತ ರವರು ಈ ಕುರಿತು ಆದಷ್ಟು ಬೇಗ ಮಾಹಿತಿ ನೀಡುವುದಾಗಿ ಭರವಸೆ ನೀಡಿರುತ್ತಾರೆ. ಈ ಕುರಿತು ಎದುರು ನೋಡುತ್ತಿದ್ದ ನನಗೆ ಇಲ್ಲಿಯವರೆಗೆ ಯಾವುದೇ ರೀತಿಯಿಂದ ಮಾಹಿತಿ ದೊರೆತಿರುವುದಿಲ್ಲ. ಅಲ್ಲದೇ, ದಿನಾಂಕ: 11.05.2023ರಂದು ಹೊರಡಿಸಲಾದ ಹೆಚ್ಚುವರಿ ಆಯ್ಕೆ ಪಟ್ಟಿಯಲ್ಲಿ ನನ್ನ ಸ್ಥಾನಕ್ಕೆ ಬೇರೆ ಅಭ್ಯರ್ಥಿಯನ್ನು ಪರಿಗಣಿಸಿರುತ್ತೀರಿ.<br><br>**ಯಾವ ಕಾರಣದಿಂದಾಗಿ ನನ್ನನ್ನು ನೇಮಕಾತಿ ಪ್ರಕ್ರಿಯೆಯಿಂದ ಕೈ ಬಿಟ್ಟಿರುತ್ತೀರಿ.** | ಕಛೇರಿಯ ಪ್ರಕಟಣೆ ದಿನಾಂಕ:20.07.2022 ಮತ್ತು ಮತ್ತೊಂದು ಪ್ರಕಟಣೆ ದಿನಾಂಕ:22.07.2022ರಲ್ಲಿ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳನ್ನು ದಿನಾಂಕ:27.07.2022ರಂದು ಪೂರ್ವಾಹ್ನ 10.30 ಗಂಟೆಗೆ ಸಂಬಂಧಿಸಿದ ವೃತ್ತಗಳ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿಗಳ ಸಮಕ್ಷಮ ಹಾಜರಾಗಲು ಸೂಚಿಸಲಾಗಿರುತ್ತದೆ. ಆದರೆ, ನೀವು ನಿಗದಿತ ದಿನಾಂಕದಂದು ನಿಗದಿತ ಪ್ರಾಧಿಕಾರದ ಸಮಕ್ಷಮ ಹಾಜರಾಗಲು ಮತ್ತು ನೀವು ಮೂಲ ದಾಖಲಾತಿಗಳನ್ನು ಸಕ್ಷಮ ಪ್ರಾಧಿಕಾರದ ಮುಂದೆ ಹಾಜರುಪಡಿಸಲು ವಿಫಲರಾಗಿರುವುದರಿಂದ ನೇಮಕಾತಿ ಪ್ರಾಧಿಕಾರವು ನಿಮಗೆ ನೇಮಕಾತಿ ಆದೇಶವನ್ನು ಜಾರಿಗೊಳಿಸಿರುವುದಿಲ್ಲ.<br><br>ಆದುದರಿಂದ, **ನಿಮ್ಮ ಮನವಿಯನ್ನು ಈ ಹಂತದಲ್ಲಿ ಪರಿಗಣಿಸಲು ಸಾಧ್ಯವಾಗುವುದಿಲ್ಲ ಎಂದು ತಿಳಿಸುತ್ತಾ, ನಿಮ್ಮ ಆಕ್ಷೇಪಣೆಯನ್ನು ಈ ಮೂಲಕ ವಿಲೇ ಮಾಡಲಾಗಿದೆ.** |

| ಕ್ರ. ಸಂ. | ಅಭ್ಯರ್ಥಿಯ ಪೂರ್ಣ ಹೆಸರು | ನೋಂದಣಿ ಸಂಖ್ಯೆ | ಅರ್ಜಿ ಸಂಖ್ಯೆ | ಜನ್ಮ ದಿನಾಂಕ | ಆಕ್ಷೇಪಣೆ | ಆಕ್ಷೇಪಣೆಯ ಕುರಿತು ಕೈಗೊಂಡ ಕ್ರಮ |
|---|---|---|---|---|---|---|
| | | | | | ಒಂದು ವೇಳೆ ದಿನಾಂಕ: 27.07.2022ರಂದು ಹಾಜರಾಗದೇ ಇರುವ ಕಾರಣಕ್ಕೆ ಕೈ ಬಿಟ್ಟಿದ್ದಾರೆ.<br>ಆ ಕುರಿತು ಹೊರಡಿಸಲಾದ ಅಧಿಸೂಚನೆಯಲ್ಲಿ ನಿಗದಿತ ದಿನಾಂಕದಂದು ಹಾಜರಾಗದೇ ಇದ್ದಲ್ಲಿ ಯಾವುದೇ ಮುನ್ಸೂಚನೆ ನೀಡದೆ ನೇಮಕಾತಿಯಿಮದ ಕೈಬಿಡುವ ಕುರತು ಯಾವುದೇ ರೀತಿಯಲ್ಲಿ ಉಲ್ಲೇಖಿಸಿರುವುದಿಲ್ಲ.<br>ಅದಲ್ಲದೇ, ಸದರಿ ದಿನಾಂಕದಂದು ಹಾಜರಾಗಲು ಸೂಚಿಸುವಂತೆ ಯಾವುದೇ ಆದೇಶ ಪ್ರತಿ/ ಸಂದೇಶ/ ದೂರವಾಣಿ ಕರೆಯ ಮೂಲ ಸಂಪರ್ಕಿಸಿರುವುದಿಲ್ಲ.<br>1:20 ಕಟ್ ಆಫ್, ದೈಹಿಕ & ದೇಹದಾರ್ಢ್ಯತೆ ಪರೀಕ್ಷೆ, ಲಿಖಿತ ಪರೀಕ್ಷೆ, ವೈದ್ಯಕೀಯ ಪರೀಕ್ಷೆ ಹೀಗೆ 4 ಹಂತಗಳಲ್ಲಿ ಆಯ್ಕೆಯಾದ ನನ್ನನ್ನು ತರಬೇತಿ ಕೇಂದ್ರಕ್ಕೂ ನಿಯೋಜಿಸಿ, ಯಾವುದೇ ಮುನ್ಸೂಚನೆ ನೀಡದೆ ಹೇಗೆ ಕೈ ಬಿಟ್ಟಿರುತ್ತೀರಿ?<br>ಕರ್ನಾಟಕ ನಾಗರಿಕ ಸೇವಾ ನೇಮಕಾತಿ ನಿಯಮಗಳು ಪ್ರಕಾರ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಒಬ್ಬ ಅಭ್ಯರ್ಥಿಯನ್ನು ನೇಮಕಾತಿ ಪ್ರಕ್ರಿಯೆಯಿಂದ ಕೈಬಿಡಬೇಕಾದ್ದಲ್ಲಿ, ಖುದ್ದಾಗಿ ಅಭ್ಯರ್ಥಿಯೇ ದೃಢೀಕರಿಸಬೇಕಾಗಿರುತ್ತದೆ.<br>ಇಲ್ಲವೇ, ಹಾಜರಾಗಲು ವಿಳಂಬವಾದರೇ ನೇಮಕಾತಿ ಪ್ರಾಧಿಕಾರ ನೋಟೀಸು/ ದೂರವಾಣಿ ಕರೆಯ ಮೂಲಕ ಕೈ ಬಿಡುವ ಕುರಿತು ತಿಳಿಸಬೇಕಾಗಿರುತ್ತದೆ.<br>ಇವೆಲ್ಲವನ್ನೂ ಹೊರತು ಪಡಿಸಿಯೂ ಕೈಬಿಡಲು ತಮ್ಮ ಅರಣ್ಯ ಇಲಾಖೆಯ ನೇಮಕಾತಿ ನಿಯಮಗಳಲ್ಲಿ ಅವಕಾಶವಿದ್ದಲ್ಲಿ ಆ ಕುರಿತು, ದಿನಾಂಕ: 20.07.2022ರ ಅಧಿಸೂಚನೆಯಲ್ಲಿ ಸ್ಪಷ್ಟವಾಗಿ ನಮೂದಿಸಬೇಕಾಗಿತ್ತು.<br><br>ಈ ಮೇಲಿನ ಯಾವುದೇ ಕ್ರಮಗಳನ್ನು ಅನುಸರಿಸದೇ, ವಿಳಂಬಕ್ಕೆ ಸಕಾರಣವನ್ನು ಪೋಷಕರ ಮೂಲಕ & ಖುದ್ದಾಗಿ ನಾನೇ | |

| ಕ್ರ. ಸಂ. | ಅಭ್ಯರ್ಥಿಯ ಪೂರ್ಣ ಹೆಸರು | ನೋಂದಣಿ ಸಂಖ್ಯೆ | ಅರ್ಜಿ ಸಂಖ್ಯೆ | ಜನ್ಮ ದಿನಾಂಕ | ಆಕ್ಷೇಪಣೆ | ಆಕ್ಷೇಪಣೆಯ ಕುರಿತು ಕೈಗೊಂಡ ಕ್ರಮ |
|---|---|---|---|---|---|---|
| | | | | | ಹಾಜರಾಗಿ ತಿಳಿಸಲಾಗಿಯೂ, ನನ್ನನ್ನು ಆಯ್ಕೆ ಪ್ರಕ್ರಿಯೆಯಿಂದ ಕೈ ಬಿಟ್ಟಿರುತ್ತೀರಿ. ಇದರಿಂದ ನಾನು ಸಾಕಷ್ಟು ನೊಂದಿದ್ದು, ಇದಕ್ಕೆ ಸೂಕ್ತ ಕಾರಣ ತಿಳಿಸಿ ಇಲ್ಲವಾದಲ್ಲಿ ಸೂಕ್ತ ಕಾರಣ ಇಲ್ಲದೆ ನನ್ನ ಆಯ್ಕೆ ಹಕ್ಕನ್ನು ಕಸಿದಿರುವ ಬೆಂಗಳೂರು ವೃತ್ತ ನೇಮಕಾತಿ ಪ್ರಾಧಿಕಾರದ ಮುಖ್ಯಸ್ಥರು ವಿರುದ್ಧ ಶಿಸ್ತು ಕ್ರಮ ಜಾರಿಗೊಳಿಸಬೇಕಾಗಿ ಈ ಮೂಲಕ ವಿನಂತಿಸಿಕೊಳ್ಳುತ್ತೇನೆ.<br><br>ನನಗೆ ಬೇಕಾಗಿರುವುದು ಹುದ್ದೆಯಲ್ಲ...<br>ಸೂಕ್ತ ಕಾರಣ & ತಮ್ಮ ಬೇಜವಾಬ್ದಾರಿತನದಿಂದ ಅದೆಷ್ಟೋ ಬಡ ಅಭ್ಯರ್ಥಿಗಳ ಉಜ್ವಲ ಬದುಕು ಕಸಿದುಕೊಂಡ ಅಧಿಕಾರಿಗಳು ವಿರುದ್ಧ ಕ್ರಮ. | |
| 4 | ಬರ್ಲಿಂಗಪ್ಪರ ಮೌನೇಷ | 2133574 | 4015080 | 20.07.2001 | ಬರ್ಲಿಂಗಪ್ಪ ಮೌನೇಷ ಬಿನ್ ಬರ್ಲಿಂಗಪ್ಪ ಗಿರಿರಾಜಪ್ಪ, ಕಸವನಹಳ್ಳಿ, ಕಡಬಗೆರೆ ಅಂಚೆ, ಹರಪನಹಳ್ಳಿ ತಾಲ್ಲೂಕು, ಬಳ್ಳಾರಿ 583125 ಆದ ನಾನು ಅರಣ್ಯ ರಕ್ಷಕ ಹುದ್ದೆಯ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆಗೊಂಡಿರುತ್ತೇನೆ. ಆದರೆ, ಈಗಾಗಲೇ ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳ ಕಾರ್ಯಾಲಯ ಮೈಸೂರು ಜಿಲ್ಲೆ ಇವರ ಆದೇಶ ದಿನಾಂಕ: 26.12.2022ರಲ್ಲಿ ನಾನು ಗ್ರಾಮ ಆಡಳಿತ ಅಧಿಕಾರಿಯಾಗಿ ಆಯ್ಕೆಗೊಂಡು ಕಾರ್ಯನಿರ್ವಹಿಸುತ್ತಿರುವೆನು. ಆದ ಕಾರಣ ಸದರಿ ಅರಣ್ಯ ರಕ್ಷಕ ಹುದ್ದೆಯನ್ನು ಸ್ವ-ಇಚ್ಛೆಯಿಂದ ತ್ಯಜಿಸುತ್ತಿದ್ದೇನೆ ಹಾಗೂ ಇದಕ್ಕೆ ಸಂಬಂಧಪಟ್ಟ ದಾಖಲೆಗಳು ಮತ್ತು ರಾಜೀನಾಮೆಯನ್ನು ಈಗಾಗಲೇ ಅಂಚೆ ಮೂಲಕ ಕಳುಹಿಸಿರುತ್ತೇನೆ. | ನೀವು ಸಲ್ಲಿಸಿರುವ ಅಂಶಗಳನ್ನು ಪರಿಗಣಿಸಿ, ಅಗತ್ಯ ಕ್ರಮ ಕೈಗೊಳ್ಳಲಾಗುವುದು. |
| 5 | ಜ್ಯೋತಿಬಾ ಹುಬ್ಬಳ್ಳಿ | 2163069 | 4730239 | 08.04.1997 | ನಾನು ಜ್ಯೋತಿಬಾ ಹುಬ್ಬಳ್ಳಿ (Re No-2163069) ನಾನು ತಿಳಿಸುವುದು ಏನೆಂದರೆ ಈರಯ್ಯಾ ಮಠಪತಿಯವರ PH ವೈದ್ಯಕೀಯ ಸರಟಿಫಿಕೇಟ್ ನೈಜತೆಯನ್ನು ಪರಿಶೀಲನೆ ನಡೆಸಿ ಮುಂದಿನ ಕ್ರಿಯೆಯನ್ನು ಕೈಗೊಳ್ಳಬೇಕೆಂದು ಮತ್ತು ಸತ್ಯಾ | ನೀವು ಸಲ್ಲಿಸಿರುವ ಆಕ್ಷೇಪಣೆಯನ್ನು ಪರಿಶೀಲಿಸಲಾಗಿ, ಶ್ರೀ ಈರಯ್ಯ ಮಠಪತಿ ಇವರು ಅರಣ್ಯ ರಕ್ಷಕ ಹುದ್ದೆಗೆ ಆನ್‌ಲೈನ್ ಮೂಲಕ ಸಲ್ಲಿಸಿರುವ **"ಕುಷ್ಠರೋಗದಿಂದ ಗುಣಮುಖ ಹೊಂದಿದ ಅಭ್ಯರ್ಥಿ ಪ್ರಮಾಣ ಪತ್ರ"** ವನ್ನು ಪರಿಗಣಿಸಿ, ತಾತ್ಕಾಲಿಕ ಹೆಚ್ಚುವರಿ ಪಟ್ಟಿಯಲ್ಲಿ |

I/444698/2023

| ಕ್ರ. ಸಂ. | ಅಭ್ಯರ್ಥಿಯ ಪೂರ್ಣ ಹೆಸರು | ನೋಂದಣಿ ಸಂಖ್ಯೆ | ಅರ್ಜಿ ಸಂಖ್ಯೆ | ಜನ್ಮ ದಿನಾಂಕ | ಆಕ್ಷೇಪಣೆ | ಆಕ್ಷೇಪಣೆಯ ಕುರಿತು ಕೈಗೊಂಡ ಕ್ರಮ |
|---|---|---|---|---|---|---|
| | | | | | ಸತ್ಯತೆಯನ್ನು ಪರಿಶೀಲನೆ ಮಾಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ, ಏಕೆಂದರೆ ನಮಗೆ ತಿಳಿದು ಬಂದಿರುವ ಹಾಗೆ ಅದು ನಕಲಿ ಸರ್ಟಿಫಿಕೇಟ್ ಆಗಿರುತ್ತದೆ. ಆದರಿಂದ ಒಬ್ಬ ಒಳ್ಳೆಯ ಸ್ಪರ್ಧಾರ್ಥಿಗೆ ಮೋಸವಾಗಬರದು ಎಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. | ಆಯ್ಕೆ ಮಾಡಲಾಗಿರುತ್ತದೆ. ಸದರಿ ಅಭ್ಯರ್ಥಿಯು ಆನ್‌ಲೈನ್ ಮೂಲಕ ಸಲ್ಲಿಸಿರುವ ಕುಷ್ಠರೋಗದಿಂದ ಗುಣಮುಖ ಹೊಂದಿದ ಪ್ರಮಾಣ ಪತ್ರವನ್ನು **ಸಕ್ಷಮ ಪ್ರಾಧಿಕಾರವಾದ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ಸತ್ಯಾಪನೆಗೆ ಒಳಪಡಿಸಿ, ವೈದ್ಯಕೀಯ ಮಂಡಳಿ ಸಲ್ಲಿಸುವ ವರದಿಯನ್ನು ಆಧರಿಸಿ,** ಸದರಿ ಅಭ್ಯರ್ಥಿಯ ಆಯ್ಕೆಯ ಕುರಿತು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. |

**Signed by Rajiv Ranjan, Ifs**
**Date: 24-06-2023 11:26:47**

ದಿನಾಂಕ: 24.06.2023

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ಹಾಗೂ
ಆಯ್ಕೆ ಪ್ರಾಧಿಕಾರ

I/444696/2023

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ

**ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಹಾಗೂ ಆಯ್ಕೆ ಪ್ರಾಧಿಕಾರ**
**ರವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು – 560003**

**ಅಧಿಸೂಚನೆ ಸಂಖ್ಯೆ: ಬಿ9/ನೇಮಕಾತಿ/ವಿವ-1/2019-20 ದಿನಾಂಕ: 02.03.2020**
**339 ಅರಣ್ಯ ರಕ್ಷಕ ಹುದ್ದೆಗಳಿಗೆ ನೇರ ನೇಮಕಾತಿ**

## ಪ್ರಕಟಣೆ ದಿನಾಂಕ: 24.06.2023ರ ಅನುಬಂಧ - 2

**ಬೆಂಗಳೂರು ವೃತ್ತಕ್ಕೆ ಅಧಿಸೂಚಿಸಿದ 45 ಅರಣ್ಯ ರಕ್ಷಕ ಹುದ್ದೆಗಳ ಪೈಕಿ ಖಾಲಿ ಇರುವ ಹುದ್ದೆಗಳಿಗೆ** *(ಆಯಾ ಪ್ರವರ್ಗಗಳಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದೇ ಇರುವುದರಿಂದ ಮುಂದಿನ ನೇಮಕಾತಿ ಪ್ರಕ್ರಿಯೆಯ ಮೂಲಕ ಭರ್ತಿಮಾಡಬೇಕಾದ ಹುದ್ದೆಗಳನ್ನು ಹೊರತುಪಡಿಸಿ)* **ಕರ್ನಾಟಕ ಅರಣ್ಯ ಇಲಾಖೆ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 2019ರ ಷೆಡ್ಯೂಲ್-Iರ ಕ್ರ.ಸಂ. 14ರ ಕಂಡಿಕೆ (9)ರನ್ವಯ ತಯಾರಿಸಿದ ಪರಿಷ್ಕೃತ ಹೆಚ್ಚುವರಿ ಪಟ್ಟಿ**

**(ತಾತ್ಕಾಲಿಕ)**

| Sl. No. | Examination Registration No. | Application No. | Registration No. | Full Name of Applicant | Date of Birth | Gender | Category claimed | Kannada Medium Candidate | Rural Candidate | PH (Leprosy Cured) Candidate | Project Displaced Person | Ex-Military Person | Total Marks (50% of Qualification Examination Marks and 50% of Written Exam Marks) | Provisional Selected Category |
|---|---|---|---|---|---|---|---|---|---|---|---|---|---|---|
| 1 | 2300277 | 4001864 | 2020268 | SUDEEP TALAGERI | 26-08-1999 | MALE | CAT1 | Yes | No | No | No | No | 71.17 | GM – OTHERS |
| 2 | 2300198 | 4001370 | 2015305 | MANGALA | 01-08-1992 | FEMALE | CAT1 | Yes | Yes | No | No | No | 71.00 | GM - RURAL |
| 3 | 2300268 | 4008359 | 2079298 | PRAKASHA K | 04-06-2000 | MALE | 2A | Yes | Yes | No | No | No | 70.83 | GM – OTHERS |

Signed by Rajiv Ranjan, Ifs
Date: 24-06-2023 11:25:02

ದಿನಾಂಕ: 24-06-2023

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ಹಾಗೂ
ಆಯ್ಕೆ ಪ್ರಾಧಿಕಾರ